
# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2550/ಶ್ರೀ ಕ್ರೋಧಿ ನಾಮ ಸಂವತ್ಸರ

ಪುಟ : ೪ ಸಂಪುಟ : ೭೦ ಸಂಚಿಕೆ : ೦೮

15-08-2024 ಶ್ರಾವಣ ಮಾಸ : ಶುಕ್ಲ ಪಕ್ಷ ಗುರುವಾರ

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

**ಶುಭಾಶೀರ್ವಚನ** ಶ್ರೀ ಕ್ಷೇತ್ರ ಹೊಂಬುಜ

## 'ವಿವಾಹವು ಗೃಹಸ್ಥ ದೀಕ್ಷೆ ಇದೆ'

ಆಚಾರ್ಯ ದೇವರು ಮೊದಲಿಗೆ ಮುನಿ ದೀಕ್ಷೆಯ ಉಪದೇಶವನ್ನು ಕೊಡುತ್ತಾರೆ. ಪುರುಷರಿಗೆ ಐಲಕ, ಕ್ಷುಲಕ ಮತ್ತು ಮಹಿಳೆಯರಿಗೆ ಕ್ಷಲ್ಲಿಕೆ, ಆರ್ಯಿಕೆಯ ದೀಕ್ಷೆಯ ಉಪದೇಶವನ್ನು ಕೊಡುತ್ತಾರೆ. ಯಾವ ಶ್ರಾವಕರಿಗೆ ಮಹಾವ್ರತ ಹಾಗೂ ಅಣುವ್ರತಗಳು ಕೂಡ ಕಠಿಣ ಅನಿಸುತ್ತವೆಯೋ ಅಂತವರಿಗೆ ತಮ್ಮ ತಮ್ಮ ಸಾಮರ್ಥ್ಯದ ಅನುಸಾರವಾಗಿ **1) ದರ್ಶನ ಪ್ರತಿಮಾ 2) ವ್ರತ ಪ್ರತಿಮಾ 3) ಸಾಮಾಯಿಕ ಪ್ರತಿಮಾ 4) ಪ್ರೋಷದ ಪ್ರತಿಮಾ 5) ಸಚಿತ್ತತ್ಯಾಗ ಪ್ರತಿಮಾ 6) ರಾತ್ರಿಭೋಜನತ್ಯಾಗ ಪ್ರತಿಮಾ 7) ಬ್ರಹ್ಮಚರ್ಯ ಪ್ರತಿಮಾ 8) ಆರಂಭತ್ಯಾಗ ಪ್ರತಿಮಾ 9) ಪರಿಗ್ರಹತ್ಯಾಗ ಪ್ರತಿಮಾ 10) ಅನುಮತಿತ್ಯಾಗ ಪ್ರತಿಮಾ ಮತ್ತು 11) ಉದ್ದಿಷ್ಟತ್ಯಾಗ ಪ್ರತಿಮಾ ಧಾರಣೆ ಮಾಡುವುದಕ್ಕೆ ಉಪದೇಶವನ್ನು ಕೊಡುತ್ತಾರೆ.** ವಿವಾಹವಾಗಿ ಗೃಹಸ್ಥಾಶ್ರಮದಲ್ಲಿ ಧರ್ಮಧ್ಯಾನ ಪೂರ್ವಕ ಇರಲು ಉಪದೇಶವನ್ನು ಕೊಟ್ಟಿದ್ದಾರೆ ಅಥವಾ ಏಳನೇಯ ಬ್ರಹ್ಮಚರ್ಯ ಪ್ರತಿಮೆಯವರೆಗೆ ಮನೆಯಲ್ಲಿಯೇ ಇದ್ದು ಧರ್ಮ ಧ್ಯಾನ ಮಾಡಲು ತಿಳಿಸಿದ್ದಾರೆ.

WWW.HOMBUJAPADMAVATI.ORG

ಆಚಾರ್ಯ ಅಕಲಂಕದೇವರು 'ರಾಜವಾರ್ತಿಕ'ದಲ್ಲಿ ವಿವಾಹ ಎಂದು ಯಾವುದಕ್ಕೆ ಕರೆಯಬೇಕು. ಇದರ ಧಾರ್ಮಿಕ ವ್ಯಾಖ್ಯೆಯನ್ನು ಹೇಳುತ್ತಾರೆ,

'ಸದ್ವೇದಸ್ಯ ಚಾರಿತ್ರಮೋಹಸ್ಯ ಚೊದಯಾತ್
ವಿವಹನಂ ಕನ್ಯಾವರಣಂ ವಿವಾಹ ಇತ್ಯಾಖ್ಯಾಯತೆ'।

**– ರಾಜವಾರ್ತಿಕ 7/28/1/554/22**

**ಅರ್ಥ** : ಸಾತಾವೇದನೀಯ ಮತ್ತು ಚಾರಿತ್ರಮೋಹದ ಉದಯದಿಂದ ಕನ್ಯೆಯ ವರಣ ಮಾಡುವುದಕ್ಕೆ ವಿವಾಹ ಎಂದು ಕರೆಯುತ್ತಾರೆ.

ಜಿನಸೇನಾಚಾರ್ಯರು 'ವಿವಾಹ' ಎಂದರೆ 'ಪಾಣಿಗ್ರಹಣ ಸಂಸ್ಕಾರ' ಕ್ಕೆ ಗ್ರಹಸ್ಥ ದೀಕ್ಷೆ ಎಂದು ಹೇಳಿದ್ದಾರೆ, ಅದು ಈ ಪ್ರಕಾರವಾಗಿದೆ –

ಪಾಣಿಗ್ರಹಣದೀಕ್ಷಾಯಾಂ ನಿಯುಕ್ತಂ ತದ್‌ವಧುವರಮ್ ।
ಆಸಪ್ತಾಹಂ ಚರೆದ್ ಬ್ರಹ್ಮವ್ರತಂ ದೇವಾಗ್ನಿಸಾಕ್ಷಿಕಮ್ ॥

**– ಆದಿಪುರಾಣ 38/131**

**ಅರ್ಥ** : ವಿವಾಹದ ದೀಕ್ಷೆಯಲ್ಲಿ ಅಂದರೆ ಗೃಹಸ್ಥ ದೀಕ್ಷೆಯಲ್ಲಿ ಆಯ್ಕೆಯಾದ ವಧು ಮತ್ತು ವರರಿಗೆ ದೇವರು ಮತ್ತು ಅಗ್ನಿಯ ಸಾಕ್ಷಿಪೂರ್ವಕವಾಗಿ 7 ದಿನಗಳವರೆಗೆ ಬ್ರಹ್ಮಚರ್ಯ ವ್ರತವನ್ನು ಧಾರಣೆ ಮಾಡಿಕೊಳ್ಳಬೇಕು.

ಇದಲ್ಲದೇ 'ಸಂಸ್ಕೃತ-ಹಿಂದಿ-ಕೋಶ' ಆಪ್ಟೆಯಲ್ಲಿ ದೀಕ್ಷೆ ಶಬ್ದದ ಅರ್ಥ ಧರ್ಮಸಂಸ್ಕಾರ ವಿವಾಹ ದೀಕ್ಷೆ ಇದೆ. ಈ ರೀತಿಯಾಗಿ ವಿವಾಹಕ್ಕೆ ದೀಕ್ಷೆಯೆಂದು ಹೇಳಲಾಗಿದೆ. ಅಂದರೆ ವಿವಾಹವು ಗೃಹಸ್ಥ ದೀಕ್ಷೆಯಿದೆ. ಇದೇ ಪ್ರಕಾರ ನಾಲಂದಾ ಕೋಶದಲ್ಲಿಯೂ ವಿವಾಹ ದೀಕ್ಷೆಯೆಂದು ಬರೆದಿದ್ದಾರೆ. ಬೇರೆ ಬೇರೆ ಕೋಶಗ್ರಂಥಗಳಲ್ಲಿಯೂ ವಿವಾಹ ಶಬ್ದದ ಸಲುವಾಗಿ ಧರ್ಮಸಂಸ್ಕಾರ ವಿವಾಹ ದೀಕ್ಷೆ ಮತ್ತು ಗ್ರಹಸ್ಥ ದೀಕ್ಷೆ ಎಂದು ಹೇಳಲಾಗಿದೆ. ಈ ಸಂಸ್ಕಾರವನ್ನು ದೇವ-ಶಾಸ್ತ್ರ-ಗುರು ಹಾಗೂ ಕುಟುಂಬದ ಸಾಕ್ಷಿಪೂರ್ವಕವಾಗಿಯೇ ವಿವಾಹ ದೀಕ್ಷೆ ಅಂದರೆ ಗೃಹಸ್ಥ ದೀಕ್ಷೆಯನ್ನು ಕೊಡಲಾಗುತ್ತದೆ.

ಲಾಟೀ ಸಂಹಿತಾದಲ್ಲಿ ಹೇಳಿದ್ದಾರೆ –

ದೇವಶಾಸ್ತ್ರಗುರುನ್ನತ್ವಾ, ಬಂಧುವರ್ಗಾತ್ಮಸಾಕ್ಷಿಕಮ್।
ಪತ್ನಿಪಾಣಿಗ್ರಹಿತಾ ಸ್ಯಾತ್ ಅನ್ಯಾ ಚೇಟಿಕಾ ಮಾತಾ॥

**– ಲಾಟೀ ಸಂಹಿತಾ 2/178**

**ಅರ್ಥ**: ದೇವ-ಶಾಸ್ತ್ರ-ಗುರುಗಳಿಗೆ ನಮಸ್ಕರಿಸಿ ಹಾಗೂ ಸಹೋದರ-ಬಂಧುಗಳ ಸಾಕ್ಷಿಪೂರ್ವಕ ಯಾವ ಕನ್ಯೆಯ ಜೊತೆ ವಿವಾಹವನ್ನು ಮಾಡಲಾಗುತ್ತದೆಯೋ ಆ ವಿವಾಹಿತ ಸ್ತ್ರೀ ಪತ್ನಿ ಎಂದು ಕರೆಯಿಸಿಕೊಳ್ಳುತ್ತಾಳೆ. ಇಂತಹ ವಿವಾಹಿತ ಸ್ತ್ರೀಯನ್ನು ಬಿಟ್ಟು ಸೇವೆಯನ್ನು ಮಾಡುವ ಬೇರೆ ಎಲ್ಲ ಸ್ತ್ರೀಯರು ಸೇವೆ ಮಾಡುವುದರಿಂದ ದಾಸಿ ಎಂದು ಕರೆಯಿಸಿಕೊಳ್ಳುತ್ತಾರೆ.

3ನೇ ಪುಟಕ್ಕೆ

ಶ್ರೀಕ್ಷೇತ್ರ ಹೊಂಬುಜದಲ್ಲಿ ಶ್ರಾವಣ ಮಾಸದ ವಿಶೇಷ ಪೂಜೆ

## "ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಸಮರ್ಪಿಸಿದ ಉಡಿ, ಭಕ್ತರ ಇಷ್ಟಾರ್ಥ ಸಿದ್ಧಿಸಲಿ"

–ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ





**ಹೊಂಬುಜ** : ಶ್ರೀ ಕ್ರೋಧಿನಾಮ ಸಂವತ್ಸರದ ಶ್ರಾವಣ ಮಾಸದ ಪ್ರಥಮ ಶುಭ ಶುಕ್ರವಾರದಂದು ಅತಿಶಯ ಶ್ರೀಕ್ಷೇತ್ರ ಹೊಂಬುಜದ ಭಗವಾನ ಶ್ರೀ 1008 ಪಾರ್ಶ್ವನಾಥ ಸ್ವಾಮಿ ಮತ್ತು ಜಗನ್ಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಪರಂಪರಾನುಗತ ಆಗಮೋಕ್ತ ಪೂಜಾ ವಿಧಿ-ವಿಧಾನಗಳು ಸಾಂಗವಾಗಿ ನೆರವೇರಿದವು. ದೇಶದ ವಿವಿದೆಡೆಗಳಿಂದ ಆಗಮಿಸಿದ ಭಕ್ತರು ಭಕ್ತಿಪೂರ್ವಕ 'ಉಡಿ' ಸಮರ್ಪಿಸಿದರು.

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರು ಶ್ರೀ ನೇಮಿನಾಥ ಸ್ವಾಮಿ, ಶ್ರೀ ಪಾರ್ಶ್ವನಾಥ ಸ್ವಾಮಿ, ಶ್ರೀ ಸರಸ್ವತಿ ದೇವಿ, ಶ್ರೀ ಕೂಷ್ಮಾಂಡಿನಿ ದೇವಿ ಸಾನಿಧ್ಯದಲ್ಲಿ ಪೂಜೆ ಸಲ್ಲಿಸಿ ಮಹಾಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ 108 ವೈವಿಧ್ಯಮಯ ಶರ್ಕರ ನೈವೇಧ್ಯೆಗಳನ್ನು ಅರ್ಪಿಸಿದರು. ಫಲ ಪುಷ್ಪಗಳಿಂದ ಶೋಭಾಯಮಾನವಾಗಿ ಜಿನಮಂದಿರವನ್ನು ಅಲಂಕರಿಸಲಾಗಿತ್ತು.

2ನೇ ಪುಟಕ್ಕೆ

ಶ್ರೀಕ್ಷೇತ್ರ ಹೊಂಬುಜದಲ್ಲಿ ಮುಕುಟ (ಮೋಕ್ಷ) ಸಪ್ತಮಿ ಆಚರಣೆ

## "ಕಾಯ, ವಾಚಾ, ಮನಸಾ ಪರಿಶುದ್ಧತೆ ಮೋಕ್ಷ ಮಾರ್ಗ"

–ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ





**ಹೊಂಬುಜ** : ಶ್ರಾವಣ ಶುಕ್ಲ ಸಪ್ತಮಿಯ ಪ್ರಾತಃಕಾಲದಲ್ಲಿ ಜೈನ ಧರ್ಮದ ಸಿದ್ಧಾಂತಗಳನ್ನು ದೇಶದೆಲ್ಲೆಡೆ ಪ್ರಚುರಪಡಿಸಿದ 23ನೇಯ ತೀರ್ಥಂಕರ ಶ್ರೀ ಪಾರ್ಶ್ವನಾಥ ಸ್ವಾಮಿಯವರ ಮೋಕ್ಷ ಕಲ್ಯಾಣ ಸುದಿನವನ್ನು ಶ್ರೀಕ್ಷೇತ್ರ ಹೊಂಬುಜದ ಭ. ಶ್ರೀಪಾರ್ಶ್ವನಾಥ ತೀರ್ಥಂಕರ ಜಿನಮಂದಿರದಲ್ಲಿ ಆಗಮೋಕ್ತ ವಿಧಿಯಂತೆ ನೆರವೇರಿಸಲಾಯಿತು.

ಶ್ರೀಕ್ಷೇತ್ರ ಹೊಂಬುಜ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರು **"ಮನ ಕಾಯ ವಚನ ಭ್ರಷ್ಟರಾಗದೇ ಘೋರ ಉಪಸರ್ಗಗಳು ಎದುರಾದರೂ ಕ್ಷಮಾ-ಸಂಯಮ ಗುಣಗಳಿಂದ**

2ನೇ ಪುಟಕ್ಕೆ



2ನೇ ಪುಟಕ್ಕೆ

## ಶ್ರೀಕ್ಷೇತ್ರ ಹೊಂಬುಜದಲ್ಲಿ ಶ್ರಾವಣ ಮಾಸದ ವಿಶೇಷ ಪೂಜೆ

1ನೇ ಪುಟದಿಂದ



ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಭಕ್ತವೃಂದದವರು ಭಕ್ತಿಯಿಂದ ಅರ್ಪಿಸಿದ ಉಡಿ, ಭಕ್ತರ ಇಷ್ಟಾರ್ಥ ಸಿದ್ಧಿಸುವಂತಾಗಲೆಂದು ಪೂಜ್ಯ ಸ್ವಸ್ತಿಶ್ರೀಗಳವರು ಪ್ರಾರ್ಥಿಸಿ, ಹರಸಿದರು.

**ನಾಗರಪಂಚಮಿ ಆಚರಣೆ:** ಶ್ರಾವಣ ಮಾಸದ ಮೊದಲ ಪರ್ವವಾಗಿರುವ ನಾಗರಪಂಚಮಿಯನ್ನು ಶ್ರೀಕ್ಷೇತ್ರದಲ್ಲಿ ಪೂಜ್ಯ ಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ ನೆರವೇರಿಸಲಾಯಿತು. ಪ್ರಕೃತಿಯ ಸಂಪತ್ತನ್ನು ಸಂರಕ್ಷಿಸುವ ನಾಗದೇವರ ಶ್ರೀರಕ್ಷೆ ಸರ್ವರಿಗೂ ಲಭಿಸಲೆಂದು ಪರಮಪೂಜ್ಯ ಶ್ರೀಗಳವರು ಆಶೀರ್ವದಿಸಿದರು.

## ಶ್ರೀಕ್ಷೇತ್ರ ಹೊಂಬುಜದಲ್ಲಿ ಮುಕುಟ (ಮೋಕ್ಷ) ಸಪ್ತಮಿ ಆಚರಣೆ

1ನೇ ಪುಟದಿಂದ

**ಆತ್ಮಸ್ಥೈರ್ಯ ಹೊಂದಿದ್ದ ಶ್ರೀ ಪಾರ್ಶ್ವನಾಥ ಸ್ವಾಮಿಯವರ ಜೀವಿತಾವಧಿಯಲ್ಲಿ ಜೀವನ ಧರ್ಮದ ಕುರಿತು ಮಾನವ ಕಲ್ಯಾಣಕ್ಕೆ ಸಹಕಾರಿಯಾಗಬಲ್ಲ ಮೋಕ್ಷ ಮಾರ್ಗದ ಅರಿವನ್ನು ಮೂಡಿಸಿರುವರು"** ಎಂದು ಪ್ರವನಚದಲ್ಲಿ ತಿಳಿಸಿದರು.

ಶ್ರೀಕ್ಷೇತ್ರದಲ್ಲಿ ಅಷ್ಟವಿಧಾರ್ಚನೆ, ಶೋಡಶೋಪಚಾರರ ಪೂಜೆಯನ್ನು ಶ್ರೀ ಪಾರ್ಶ್ವನಾಥ ಸ್ವಾಮಿ ಸನ್ನಿಧಿಯಲ್ಲಿ ಪೂಜ್ಯ ಸ್ವಸ್ತಿಶ್ರೀಗಳ ದಿವ್ಯ ಸಾನಿಧ್ಯ, ಮಾರ್ಗದರ್ಶನದಲ್ಲಿ ಸಮರ್ಪಿಸಲಾಯಿತು. ನಿರ್ವಾಣ ಲಾಡು ಅರ್ಪಿಸಿ, ಸ್ವರ್ಣ ಪಲ್ಲಕ್ಕಿಯಲ್ಲಿ ಶ್ರೀ ಪಾರ್ಶ್ವನಾಥ ತೀರ್ಥಂಕರರ ಜಿನಬಿಂಬವನ್ನು ಭಕ್ತವೃಂದದವರು ಉತ್ಸವ ನೆರವೇರಿಸಿದರು. ಜಗನ್ಮಾತೆ ಯಕ್ಷಿಶ್ರೀ ಪದ್ಮಾವತಿ ದೇವಿ ಸನ್ನಿಧಿಂಯಲ್ಲಿ ನಿರ್ವಾಣ ಕಲ್ಯಾಣದ ವಿಶೇಷ ಪೂಜೆಯಲ್ಲಿ ಭಕ್ತಸಮುದಾಯದವರು ಪಾಲ್ಗೊಂಡರು. ತ್ರಿಕೂಟ ಜಿನಾಲಯದ ಶ್ರೀ ಪಾರ್ಶ್ವನಾಥ ಸ್ವಾಮಿ ಸನ್ನಿಧಿಯಲ್ಲಿ ವಿಶೇಷ ಪೂಜೆ ಏರ್ಪಡಿಸಲಾಗಿತ್ತು. ಜೈನ ಧರ್ಮದಲ್ಲಿ 'ಮುಕುಟ ಸಪ್ತಮಿ' ಆಚರಣೆಯು ದ್ವೇಷ ಅಸೂಯೆ ತ್ಯಜಿಸಿ ಆತ್ಮೋನ್ನತಿಗಾಗಿ ಸದಾ ಸಹನಶೀಲರಾಗುವಂತೆ ಪ್ರೇರೇಪಿಸುತ್ತದೆ.

ಭಗವಾನ ಶ್ರೀ ಪಾರ್ಶ್ವನಾಥ ತೀರ್ಥಂಕರರ ಮೋಕ್ಷ ಸಪ್ತಮಿ ಅಂಗವಾಗಿ ಪರಮಪೂಜ್ಯ ಆರ್ಯಿಕಾ ಶ್ರೀ 105 ಶಿವಮತಿ ಮಾತಾಜಿ ಹಾಗೂ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಪಾವನ ಸಾನಿಧ್ಯದಲ್ಲಿ 08–08–2024 ರಿಂದ 11–08–2024ರವರೆಗೆ ಶ್ರೀ ಪಾರ್ಶ್ವನಾಥ ಚರಿತೆ ಪುರಾಣ ವಾಚನ ಕಾರ್ಯಕ್ರಮ ನೆರವೇರಿತು.

**ಜಿನ-ದನಿ**

ವಿಜ್ಜಾ ಮಿತ್ತಂ ವಿದೇಸೆಸಂ, ಇತ್ಥೀ ಮಿತ್ತಂ ಗಿಹೆ ತಹಾ ।
ರೋಗಿನಾ ಭೇಸಜಂ ಮಿತ್ತಂ, ಧಮ್ಮೋ ಮಿತ್ತಂ ಹು ಸವ್ವದಾ ॥7॥

ಅರ್ಥ: ವಿದೇಶದಲ್ಲಿ ವಿದ್ಯೆಯು ಮಿತ್ರವಿದೆ. ಮನೆಯಲ್ಲಿ ಸ್ತ್ರೀ ಮಿತ್ರಳಿದ್ದಾಳೆ, ರೋಗಿಗಳಿಗೆ ಔಷಧಿ ಮಿತ್ರವಿದೆ ಮತ್ತು ಧರ್ಮವು ಯಾವಾಗಲೂ ಮಿತ್ರವಿದೆ.

–ರಾಷ್ಟ್ರ ಶಾಂತಿ ಮಹಾಯಜ್ಞ

## ಬರಲಿರುವ ಪರ್ವದಿನಗಳು

ಕ್ರೋಧಿನಾಮ ಸಂವತ್ಸರದ

ಶ್ರಾವಣಮಾಸ ಶುಕ್ಲಪಕ್ಷ ದ್ವಾದಶಿಯಿಂದ ಶ್ರಾವಣಮಾಸ ಶುಕ್ಲಪಕ್ಷ ತ್ರಯೋದಶಿಯವರೆಗೆ

ಶ್ರಾವಣ ಮಾಸ:

ಆ. 17 ಶನಿ–ದ್ವಾದಶಿ–ಪೂ.ಷಾ.
ಆ. 18 ಭಾನು–ತ್ರಯೋದಶಿ–ಚತುರ್ದಶಿ–ಉ.ಷಾ.
**ಆ. 19 ಸೋಮ–ಹುಣ್ಣಿಮೆ–ಶ್ರವಣ, ರಕ್ಷಾಬಂಧನ, ಶ್ರೀಕ್ಷೇತ್ರ ಹೊಂಬುಜದಲ್ಲಿ ಯಜ್ಞೋಪವೀತ ಧಾರಣೆ.**
ಆ. 20 ಮಂಗಳ–ಪ್ರತಿಪದ–ಶತಭಿಷ–ಧನಿಷ್ಠ
ಆ. 21 ಬುಧ–ಬಿದಿಗೆ–ಪೂ.ಭಾ.
ಆ. 22 ಗುರು–ತದಿಗೆ–ಉ.ಭಾ.
**ಆ. 23 ಶುಕ್ರ–ಚತುರ್ಥಿ–ರೇವತಿ, ಶ್ರೀಕ್ಷೇತ್ರ ಹೊಂಬುಜದಲ್ಲಿ 3ನೇ ಸಂಪತ್ ಶುಕ್ರವಾರ.**
ಆ. 24 ಶನಿ–ಪಂಚಮಿ–ಅಶ್ವಿನಿ
ಆ. 25 ಭಾನು–ಷಷ್ಠಿ–ಸಪ್ತಮಿ–ಭರಣಿ
ಆ. 26 ಸೋಮ–ಅಷ್ಟಮಿ–ಕೃತಿಕಾ
ಆ. 27 ಮಂಗಳ–ನವಮಿ–ರೋಹಿಣಿ
ಆ. 28 ಬುಧ–ದಶಮಿ–ಮೃಗಶಿರಾ
ಆ. 29 ಗುರು–ಏಕಾದಶಿ–ಆರಿದ್ರಾ
**ಆ. 30 ಶುಕ್ರ–ದ್ವಾದಶಿ–ಪುನರ್ವಸು, ಶ್ರೀಕ್ಷೇತ್ರ ಹೊಂಬುಜದಲ್ಲಿ 4ನೇ ಸಂಪತ್ ಶುಕ್ರವಾರ.**
ಆ. 31 ಶನಿ–ತ್ರಯೋದಶಿ–ಪುಷ್ಯ
ಸೆ. 01 ಭಾನು–ಚತುರ್ದಶಿ–ಆಶ್ಲೇಷಾ
ಸೆ. 02 ಸೋಮ–ಅಮವಾಸೆಮಘಾ

ಭಾದ್ರಪದ ಮಾಸ:

ಸೆ. 03 ಮಂಗಳ–ಅಮವಾಸ್ಯೆ–ಪೂರ್ವಾ
ಸೆ. 04 ಬುಧ–ಪ್ರತಿಪದ–ಉತ್ತರ
ಸೆ. 05 ಗುರು–ಬಿದಿಗೆ–ಹಸ್ತ
ಸೆ. 06 ಶುಕ್ರ–ತದಿಗೆ–ಹಸ್ತ
ಸೆ. 07 ಶನಿ–ಚತುರ್ಥಿ–ಚಿತ್ತಾ
**ಸೆ. 08 ಭಾನು–ಪಂಚಮಿ–ಸ್ವಾತಿ, ದಶಲಕ್ಷಣ ಪರ್ವಾರಂಭ.**
ಸೆ. 09 ಸೋಮ–ಷಷ್ಠಿ–ವಿಶಾಖ
ಸೆ. 10 ಮಂಗಳ–ಸಪ್ತಮಿ–ಅನುರಾಧ
ಸೆ. 11 ಬುಧ–ಅಷ್ಟಮಿ–ಜ್ಯೇಷ್ಠ
ಸೆ. 12 ಗುರು–ನವಮಿ–ಮೂಲ
ಸೆ. 13 ಶುಕ್ರ–ದಶಮಿ–ಪೂ.ಷಾ.
ಸೆ. 14 ಶನಿ–ಏಕಾದಶಿ–ಉ.ಷಾ.
ಸೆ. 15 ಭಾನು–ದ್ವಾದಶಿ–ಶ್ರವಣ
ಸೆ. 16 ಸೋಮ–ತ್ರಯೋದಶಿ–ಧನಿಷ್ಠ.

## ದ್ವಾದಶಾನುಪ್ರೇಕ್ಷೆಯ ಪದ್ಯಗಳು

WWW.HOMBUJAPADMAVATI.ORG

ರಚನೆ : ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಶ್ರವಣಬೆಳಗೊಳ ಮಠ

1) ಭೋಗ ಭಾಗ್ಯ ಸ್ವರ್ಗ ಸುಖಂಗಳು
ಧನ ಯೌವನ ಶರೀರ ನಿತ್ಯವಲ್ಲ
ಮೃಷ್ಟಾನ್ನ ಭೋಜನ ಇಂದ್ರಿಯ ಸುಖಗಳು
ಯಾರಿಗೂ ಎಂದೂ ಸ್ಥಿರವಲ್ಲ.
ಮುಕ್ತಿ ಸಾಧನೆಗೆ ಅನಿತ್ಯಾನುಪ್ರೇಕ್ಷೆ ಇದು
ಎಂದೂ ಮರೆಯದೆ ಭಾವಿಸುತಿರು ॥

2) ದಾರಿದ್ರ್ಯ ರೋಗ ರುಜಿನಬಂದೊಡೆ
ಯಾರಿಗೆ ಯಾರು ರಕ್ಷಕರಿಲ್ಲ
ಧರ್ಮವೇ ಮಂಗಲ ಧರ್ಮವೇ ಉತ್ತಮ
ಧರ್ಮವೇ ಶರಣು ನಮಗೆಲ್ಲ
ಮುಕ್ತಿ ಸಾಧನೆಗೆ ಅಶರಣ ಅನುಪ್ರೇಕ್ಷೆ ಇದು
ಎಂದೂ ಮರೆಯದೆ ಭಾವಿಸುತಿರು ॥

3) ನಾಲ್ಕು ಗತಿಗಳ ಜನ್ಮ ಮರಣಗಳು
ನಾಲ್ಕು ಕಷಾಯಗಳ ಫಲಿತಾಂಶಗಳು
ಮಿಥ್ಯಾ ಮಾಯೆಯ ಬಿಡು ಭವ್ಯಾತ್ಮನೆ
ನಾಲ್ಕು ಅನುಯೋಗಗಳ ಭಾವಿಸುತಿರು
ಮುಕ್ತಿ ಸಾಧನೆಗೆ ಸಂಸಾರಾನುಪ್ರೇಕ್ಷೆ ಇದು
ಎಂದೂ ಮರೆಯದೆ ಭಾವಿಸುತಿರು ॥

4) ಹಿಂದಿನ ಜನ್ಮಗಳಿಸಿದ ಸಂಪದ ತಂದಿಲ್ಲ
ಈ ಜನ್ಮ ಗಳಿಸಿದ ಸಂಪದ ಒಯ್ಯುವುದಿಲ್ಲ
ಬರಿಗೈ ಬಂದಿಹೇ ಬರಿಗೈ ಹೋಗುವೆಯಲ್ಲ
ಪರಿಗ್ರಹ ಬಿಡದೇ ಸಮಾಧಿ ಸಾಧ್ಯವಿಲ್ಲ
ಮುಕ್ತಿ ಸಾಧನೆಗೆ ಏಕತ್ವಾನುಪ್ರೇಕ್ಷೆ ಇದು
ಎಂದೂ ಮರೆಯದೆ ಭಾವಿಸುತಿರು ॥

5) ನಿಜ ಶರೀರವಿದು ಬಾಡಿಗೆ ಮನೆಯಂತಿದು
ನಿಜ ಪರಿವಾರ ಇದು ಮರದ ಹಕ್ಕಿಗಳಂತಿಹುದು
ನಿಜ ಶರೀರ ರಕ್ಷಣೆ ವೈದ್ಯ ಅಸಾಧ್ಯವಿದು
ನಿಜಾತ್ಮ ಹಿತ ಹಂಸಧ್ವನಿಯಾಗಿಹುದು
ಮುಕ್ತಿ ಸಾಧನೆಗೆ ಅನ್ಯತ್ವಾನುಪ್ರೇಕ್ಷೆ ಇದು
ಎಂದೂ ಮರೆಯದೆ ಭಾವಿಸುತಿರು ॥

6) ಚರ್ಮವ ತೊಳೆದರೆ ಕರ್ಮ ತೊಳೆಯದು
ಕರ್ಮ ನಂಬಿದರೆ ಆತ್ಮಕೆಡುವುದು
ಧರ್ಮದ ಮರ್ಮವರಿತು ಬಾಳುವುದು
ದೇಹಬುದ್ಧಿಯ ಮರೆತು ಸ್ವಾನುಭೂತಿ ಮಾಡು
ಮುಕ್ತಿ ಸಾಧನೆಗೆ ಅಶುಚಿತ್ವ ಅನುಪ್ರೇಕ್ಷೆ ಇದು
ಎಂದೂ ಮರೆಯದೆ ಭಾವಿಸುತಿರು ॥

7) ಕರ್ಮ ಬರುತಿರೆ ತಿಳಿಯದಿದ್ದರೆ
ಅನ್ಯರ ದೂರಿದರೇನು ಫಲ
ಪಾಪಸ್ರವ ಭಯದೀ ಪುಣ್ಯವಂತನಾಗು
ಷೋಡಶಭಾವನೆಯಿಂದ ತೀರ್ಥಂಕರನಾಗು
ಮುಕ್ತಿ ಸಾಧನೆಗೆ ಆಸ್ರವಾನುಪ್ರೇಕ್ಷೆ ಇದು
ಎಂದೂ ಮರೆಯದೆ ಭಾವಿಸುತಿರು ॥

8) ವ್ರತನಿಯಮದಿಂದ ಧರ್ಮ ಧ್ಯಾನಮಾಡು
ವ್ರತಿಯಾಗಿ ಕರ್ಮ ಸಂಹಾರ ಮಾಡು
ಮಿಥ್ಯಾವರ್ಧಕಷಾಯ ಸುಟ್ಟು ಹಾಕು
ಧರ್ಮ ಗಟ್ಟಿ ಹಿಡಿದರೆ ಕರ್ಮ ಬಿಟ್ಟು ಪೋಪುದು
ಮುಕ್ತಿ ಸಾಧನೆಗೆ ಸಂವರಾನುಪ್ರೇಕ್ಷೆ ಇದು
ಎಂದೂ ಮರೆಯದೆ ಭಾವಿಸುತಿರು ॥

9) ಅನಿತ್ಯ ಸಂಪದವ ಬಿಟ್ಟು ತಪೋಧನನಾಗು
ಅನ್ಯಚಿಂತೆಯ ಬಿಟ್ಟು ಆತ್ಮಹಿತೈಷಿಯಾಗು
ಸಮಯಸಾರ ಸ್ವಾಧ್ಯಾಯ ನಿರತನಾಗು
ಸಮಯ ವ್ಯರ್ಥ ಕಳೆಯದೇ ಜಾಗೃತನಾಗು
ಮುಕ್ತಿ ಸಾಧನೆಗೆ ನಿರ್ಜರಾನುಪ್ರೇಕ್ಷೆ ಇದು
ಎಂದೂ ಮರೆಯದೆ ಭಾವಿಸುತಿರು ॥

10) ತ್ರಿಲೋಕ ತ್ರಿಕಾಲ ಸುತ್ತಿ ಸುತ್ತಿ ಸುಸ್ತಾಯ್ತು
ಈ ಸಂಸಾರ ಪರಿವಾರ ಸಾಕು ಸಾಕಾಯ್ತು
ಲೋಕ ಪರಿಭ್ರಮಣೆ ಅತಿ ದುಃಖವಾಯ್ತು
ಲೋಕಾಗ್ರಸಿದ್ಧನಾಗಲು ಗಟ್ಟಿ ಮನಸಾಯ್ತು
ಮುಕ್ತಿ ಸಾಧನೆಗೆ ಲೋಕಾನುಪ್ರೇಕ್ಷೆ ಇದು
ಎಂದೂ ಮರೆಯದೆ ಭಾವಿಸುತಿರು ॥

11) ಸಂಸಾರ ಮಾರ್ಗ ಬೋಧಕರು ಹೇರಳ
ಮುಕ್ತಿ ಮಾರ್ಗ ಬೋಧಕರು ಅತಿ ವಿರಳ
ಅಹಂಕಾರ ಮಮಕಾರವಿಲ್ಲದವರು ತೀರ ವಿರಳ
ತತ್ವಾರ್ಥ ಪ್ರಬೋಧಕರು ಬಲು ವಿರಳ
ಮುಕ್ತಿ ಸಾಧನೆಗೆ ಬೋಧದುರ್ಲಾಭಾನುಪ್ರೇಕ್ಷೆ ಇದು
ಎಂದೂ ಮರೆಯದೆ ಭಾವಿಸುತಿರು ॥

12) ಶ್ರಾವಕನಾಗಿ ದಾನ ಧರ್ಮ ಮಾಡು
ತ್ಯಾಗಿಯಾಗಿ ಕರ್ಮ ಸಂವರ ಮಾಡು
ತತ್ವಾರ್ಥ ಶ್ರದ್ಧೆಯಿಂದ ಮೋಕ್ಷ ಭಾಜನನಾಗು
ಮೋಕ್ಷಾರ್ಥಿಯಾಗಿ ಅರಿಹಂತಸಿದ್ಧನಾಗು
ಮುಕ್ತಿ ಸಾಧನೆಗೆ ಧರ್ಮಾನುಪ್ರೇಕ್ಷೆ ಇದು
ಎಂದೂ ಮರೆಯದೆ ಭಾವಿಸುತಿರು ॥

ದ್ವಾದಶಾನುಪ್ರೇಕ್ಷೆಯಿದು, ದ್ವಾದಶಾಂಗ ಶ್ರುತಸಾರವಿದು, ಧವಲತ್ರಯ ಸಿರಿಯಿದು, ಬೆಳಗುಳ ಶ್ರೀಯ ಶ್ರುತಭಕ್ತಿ ಇದು ॥

**50ನೇ ವರ್ಷದ ದೀಕ್ಷಾ ಸುವರ್ಣ ಮಹೋತ್ಸವ**

**ದಿನಾಂಕ: 01-12-2019**

### 29ನೇ ಪ್ರತಿಷ್ಠಾ ಮಹೋತ್ಸವ

# "ಜೈನ ಧರ್ಮದ ಲೌಕಿಕ ವಿದ್ಯೆ–ಆಂತರಿಕ ಸತ್ವ ತಿಳಿಯಬೇಕಿದೆ"

–ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



ಬೆಂಗಳೂರು: **ಶಾಂತಿ, ಅಹಿಂಸೆ, ಸಂಸ್ಕೃತಿ, ಸಂಸ್ಕಾರಗಳು ಜೈನ ಧರ್ಮದ ಮೂಲ ಸಿದ್ಧಾಂತಗಳಾಗಿದ್ದು ಜೈನ ಧರ್ಮದ ಲೌಕಿಕ ವಿದ್ಯೆ ಹಾಗೂ ಜೈನ ಧರ್ಮದೊಳಗಿನ ಆಂತರಿಕ ತತ್ವಗಳನ್ನು ಪ್ರತಿಯೊಬ್ಬ ಜೈನರು ತಿಳಿಯಬೇಕಾದ ಅಗತ್ಯವಿದೆ** ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಜಿಗಳವರು ಜುಲೈ 27ರಂದು ನಗರದ ಶ್ರೀಚಕ್ರೇಶ್ವರಿ ಮಹಿಳಾ ಸಮಾಜದ ಭಗವಾನ ಶ್ರೀ ಆದಿನಾಥ ತೀರ್ಥಂಕರರ 29ನೇ ಪ್ರತಿಷ್ಠಾ ಮಹೋತ್ಸವದ ಪಾವನ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ವಿಶ್ವ ಹಾಗೂ ಲೋಕ ಕಲ್ಯಾಣದ ಸಂಸ್ಕೃತಿಗೆ ಈ ಧರ್ಮ ಅನಾದಿ ಕಾಲದಿಂದಲೂ ಶ್ರಮಿಸಿದ್ದು, ಮಾನವ ಕುಲಕ್ಕೆ ಇದರ ಕೊಡುಗೆ ಅಪಾರ. ಜೈನ ಧರ್ಮ ಹೆಚ್ಚು ಪ್ರಚಲಿತದಲ್ಲಿದ್ದು ಮೊದಲು ನಾವು ಯಾರೆಂದು ತಿಳಿಯಬೇಕಾದ ಅಗತ್ಯವಿದೆ ಎಂದರು. ನಮ್ಮ ಸಂಪ್ರದಾಯದಲ್ಲಿ ಜಾತಿ ಹಾಗೂ ಸೂತಕವನ್ನು ತೆಗೆದು ಹಾಕಿ ಶಾಂತಿ ಮತ್ತು ಅಹಿಂಸೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ. ಈ ಮಾರ್ಗದಲ್ಲಿ ನಡೆಯುವುದು ಜೈನ ಧರ್ಮದ ಸಿದ್ಧಾಂತವಾಗಿದೆ. ಇತರರಿಗೆ ನೋವನ್ನು ನೀಡದೆ ಜೈನ ಧರ್ಮ ಲೌಕಿಕ ವಿದ್ಯೆ, ಆಂತರಿಕ ಸತ್ವ ತಿಳಿಯಬೇಕಿದೆ ಎಂದರು.

ಧರ್ಮದ ಬಗ್ಗೆ ತಿಳುವಳಿಕೆ ಅಗತ್ಯ. ನಮ್ಮ ಧರ್ಮದ ಆಂತರಿಕ ಸತ್ವ ತಿಳಿಯದ ಕಾರಣ ನಮಗೆ ಈಗಿನ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಸಾರದ ಎಲ್ಲಾ ಕಷ್ಟಗಳನ್ನು ನಿವಾರಿಸುವುದು ಧರ್ಮವಾಗಿದೆ. ಇದು ಮಾನವ ತತ್ವ ಪಾಲನೆಯಿಂದ ಮಾಡಿದ ಧರ್ಮವಾಗಿದೆ. ಬೆಂಗಳೂರಿನಲ್ಲಿ ಮಹಿಳಾ ಸಹಕಾರ ಬ್ಯಾಂಕ್ ಅಗತ್ಯವಿದೆ. ಜೈನರ ಜನಗಣತಿ ದಾಖಲೆಯಲ್ಲಿ. "ಜೈನ" ಎಂದು ನಮೂದಿಸುವಂತೆ ತಿಳಿಸಿದರು.

WWW.HOMBUJAPADMAVATI.ORG

ಕಾರ್ಯಕ್ರಮ ಉದ್ಘಾಟಿಸಿದ ರಾಜ್ಯ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶ್ರೀ ಪದ್ಮರಾಜ್ ನೇಮಿಚಂದ್ರ ದೇಸಾಯಿ ಮಾತನಾಡಿ, ಮಹಿಳೆಯರಿಂದ ಈ ಸಮಾಜ ನಡೆಯುತ್ತಿದ್ದು, ನಾರಿ ಶಕ್ತಿಗೆ ಪೂರಕವಾಗಿದೆ. ಸಮಾಜದ ಮಹಿಳೆಯರಿಗೆ ಸ್ಫೂರ್ತಿಯಾಗಿದೆ. ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಸಂತಸ ತಂದಿದ್ದು, ಜೈನ ಧರ್ಮ ಜನಸಂಖ್ಯೆಯಲ್ಲಿ ಕಡಿಮೆ ಇದ್ದರೂ ಸಾಧನೆಯಲ್ಲಿ ಮುಂದಿದೆ. ಸರ್ಕಾರದ ಸವಲತ್ತು ಸಮಾಜದ ಜನರಿಗೆ ದೊರಕಬೇಕಿದ್ದು ಈ ಬಗ್ಗೆ ಭಟ್ಟಾರಕರ ಮಾರ್ಗದರ್ಶನ ಅಗತ್ಯವಿದೆ ಎಂದರು.

ಶ್ರೀ ಚಕ್ರೇಶ್ವರಿ ಮಹಿಳಾ ಸಮಾಜದ ಅಧ್ಯಕ್ಷರಾದ ನಾಗಶ್ರೀ ಮುಪ್ಪನೇ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಡಾ. ಪದ್ಮಿನಿ ನಾಗರಾಜ್, ಡಾ. ನೀರಜಾ ನಾಗೇಂದ್ರ ಕುಮಾರ್, ರಾಜಕೀರ್ತಿ ಇನ್ನಿತರರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಟೆನಿಸ್ ಕ್ಷೇತ್ರದಿಂದ ಚೈತ್ರಾಲಿ ನರ್ದೇ, ಈಜುಗಾರಿಕೆಯಿಂದ ಸಮನ್ವಿ ಇಲ್ಕಲ್, ಸನ್ಮತಿ ಹಾಗೂ ಚೆಸ್ ಕ್ಷೇತ್ರದಿಂದ ತನಿಷಾ ಗೋಟಡಿಕೆಯವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ದೀಪಾಂಜಲಿ ಗೌರಜ್, ಖಜಾಂಚಿ ರಾಣಿ ಜಯವೀರ್ ಜೈನ್ ಸೇರಿದಂತೆ ಪದಾಧಿಕಾರಿಗಳು ಕಾರ್ಯಕಾರಿ ಸಮಿತಿಯ ಸದಸ್ಯರು, ಶ್ರಾವಕ – ಶ್ರಾವಕಿಯರು ಸೇರಿದಂತೆ ಶ್ರೀಚಕ್ರೇಶ್ವರಿ ಮಹಿಳಾ ಸಮಾಜದ ಸದಸ್ಯರು ಭಾಗವಹಿಸಿದ್ದರು.

ಚಕ್ರೇಶ್ವರಿ ಮಹಿಳಾ ಸಮಾಜದ ಅಧ್ಯಕ್ಷ ನಾಗಶ್ರೀ ಮುಪ್ಪಾನೆ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳ ನಾಡಿದರು. ಚಕ್ರೇಶ್ವರಿ ಮಹಿಳಾ ಸಮಾಜದ ನಿರ್ದೇಶಕಿಯರು ಮಂಗಳಾಚಾರಣೆ ನೆರವೇರಿಸಿದರು. ದೀಪಾಂಜಲಿ ಗೌರಜ್ ವಂದಿಸಿದರು.

## ಸ್ವಾತಂತ್ರ್ಯೋತ್ಸವ ಶುಭ ಸಂದೇಶ

### 'ಭಾರತಾಂಬೆಯ ಶ್ರೀರಕ್ಷೆ ದೇಶದ ಸಂಕಷ್ಟ–ಸಮಸ್ಯೆಗಳನ್ನು ಪರಿಹರಿಸಲಿ'

ಭವ್ಯ, ದಿವ್ಯ ಭಾರತ ದೇಶ ನಮ್ಮೆಲ್ಲರ ಮಾತೃಭೂಮಿ. ಅಪರಿಮಿತ, ಸಮೃದ್ಧ ಸಂಪನ್ಮೂಲ ಹೊಂದಿರುವ ರಾಷ್ಟ್ರ. ಸ್ವಾತಂತ್ರ್ಯ ಗಳಿಸಿದ 77 ಸಂವತ್ಸರಗಳು ಅಭಿವೃದ್ಧಿಯ ರಥವನ್ನು ಮುನ್ನಡೆಸಿದೆ. 78ನೇ ಸ್ವಾತಂತ್ರ್ಯೋತ್ಸವವು ನಮ್ಮನ್ನು ದೇಶ ಸೇವೆಯ ಪುಣ್ಯ ಯೋಜನೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಲು ಸತ್ಪ್ರೇರಣೆ ನೀಡುವುದಾಗಿದೆ. ಸ್ವದೇಶಾಭಿಮಾನ, ಭಾರತೀಯ ಧರ್ಮ, ಸಂಸ್ಕೃತಿ ಬೆಳೆಸುವಂತೆ ಯುವ ವಿದ್ಯಾರ್ಥಿವೃಂದದವರು ಪ್ರತಿಜ್ಞಾಪೂರ್ವಕ ಕರ್ತವ್ಯ, ನಿಷ್ಠೆ, ಪ್ರಾಮಾಣಿಕತೆ, ದಕ್ಷತೆ, ಜಾಣ್ಮೆ ಸಾದರಪಡಿಸುವಂತಾಗಲಿ. ಭಾರತಾಂಬೆಯ ಶ್ರೀರಕ್ಷೆ ದೇಶದ ಸಂಕಷ್ಟ–ಸಮಸ್ಯೆಗಳನ್ನು ಪರಿಹರಿಸಿ "ಕ್ಷೇಮಂ ಸರ್ವ ಪ್ರಜಾನಾಂ" ಎಂಬ ಸೂಕ್ತಿ ಫಲಿಸಲಿ.

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ

## 'ವಿವಾಹವು ಗೃಹಸ್ಥ ದೀಕ್ಷೆ ಇದೆ'

1ನೇ ಪುಟದಿಂದ

ಆದಿಪುರಾಣದಲ್ಲಿ ಆಚಾರ್ಯ ಜಿನಸೇನರು ಸ್ಪಷ್ಟವಾಗಿ ಹೇಳುತ್ತಾರೆ–

ತತೋಽಸ್ಯ ಗುರ್ವನುಜ್ಞಾನಾದಿಷ್ಟಾ ವೈವಾಹಿಕೀ ಕ್ರಿಯಾ।
ವೈವಾಹಿಕೆ ಕುಲೆ ಕನ್ಯಾಮುಚಿತಂ ಪರಿಣೆಷ್ಯತಃ ॥

– ಆದಿಪುರಾಣ 38/127

**ಅರ್ಥ** : ಅದಾದ ನಂತರ ವಿವಾಹಕ್ಕೆ ಯೋಗ್ಯ ಕುಲದಲ್ಲಿ ಹುಟ್ಟಿದ ಕನ್ಯೆಯ ಜೊತೆಗೆ ಯಾರು ವಿವಾಹ ಮಾಡಿಕೊಳ್ಳಲು ಬಯಸುತ್ತಾರೆ, ಅಂತಹ ಪುರುಷನ ಗುರುವಿನ ಆಜ್ಞೆಯೊಂದಿಗೆ ವಿವಾಹದ ಕಾರ್ಯವನ್ನು ಮಾಡಲಾಗುತ್ತದೆ.

ಸಿದ್ಧಾರ್ಚನವಿಧಿಂ ಸಮ್ಯಕ್ ನಿರ್ವರ್ತ್ಯ ದ್ವಿಜಸತ್ತಮಾಃ।
ಕೃತಾಗ್ನಿತ್ರಯಸಂಪೂಜಾಃ ಕುರ್ಯುಸ್ತತ್ಸಾಕ್ಷಿತಾಂ ಕ್ರಿಯಾಮ್ ॥

– ಆದಿಪುರಾಣ 38/128

**ಅರ್ಥ**: ಉತ್ತಮ ಶ್ರಾವಕರುಗಳಿಗೆ ಬೇಕಾದುದು ಅವರು ಎಲ್ಲಕ್ಕಿಂತ ಮೊದಲು ಒಳ್ಳೆಯ ರೀತಿಯಲ್ಲಿ ಸಿದ್ಧ ಭಗವಾನರ ಪೂಜೆ ಮತ್ತು ಮೂರೂ ತರಹದ ಅಗ್ನಿಗಳ ಪೂಜೆ ಮಾಡಿ ಅವರ ಸಾಕ್ಷಿಪೂರ್ವಕವಾಗಿ ಆ ವಿವಾಹದ ಕ್ರಿಯೆಯನ್ನು ಮಾಡುವುದು.

ಪುಣ್ಯಾಶ್ರಮೆ ಕ್ವಚಿತ್ ಸಿದ್ಧಪ್ರತಿಮಾಭಿಮುಖಂ ತಯೋಃ।
ದಂಪತ್ಯೋಃ ಪರಯಾ ಭೂತ್ಯಾ ಕಾರ್ಯಃ ಪಾಣಿಗ್ರಹೋತ್ಸವಃ ॥

– ಆದಿಪುರಾಣ 38/129

**ಅರ್ಥ**: ಯಾವುದೇ ಪವಿತ್ರ ಸ್ಥಾನದಲ್ಲಿ ದೊಡ್ಡ ವ್ಯಕ್ತಿತ್ವದ ಜೊತೆಗೆ ಸಿದ್ಧ ಭಗವಾನರ ಪ್ರತಿಮೆಯ ಎದುರಿಗೆ ವರ–ವಧುವಿನ ವಿವಾಹೋತ್ಸವವನ್ನು ಮಾಡಬೇಕು.

ವೇಧ್ಯಾಂ ಪ್ರಣೀತಮಗ್ನಿನಾಂ ತ್ರಯಂ ದ್ವಯಮಥೈಕಕಮ್।
ತತಃ ಪ್ರದಕ್ಷಿಣೀಕೃತ್ಯ ಪ್ರಸಜ್ಯ ವಿನಿವೇಶನಮ್ ॥

– ಆದಿಪುರಾಣ 38/130

**ಅರ್ಥ**: ವೇದಿಯಲ್ಲಿ ಯಾವ ಮೂರು, ಎರಡು ಅಥವಾ ಒಂದು ಅಗ್ನಿಯನ್ನು ರಚಿಸಲಾಗುತ್ತದೆ ಅದರ ಪ್ರದಕ್ಷಿಣೆಗಳನ್ನು ಹಾಕಿ ವರ–ವಧುವಿಗೆ ಹತ್ತಿರದಲ್ಲೇ ಕುಳಿತುಕೊಳ್ಳಬೇಕು.

ವಿವಾಹದಲ್ಲಿ ಯಾರು ಏನನ್ನು ಬೇಡಿಕೊಳ್ಳುತ್ತಾರೆ

ಕನ್ಯಾ ವರಯತೆ ರೂಪಂ, ಮಾತಾ ವಿತ್ತಂ ಪಿತಾ ಶ್ರುತಂ।
ಬಂಧುವಾ ಹಿತಮಿಚ್ಛಂತಿ, ಮಿಷ್ಟಾನ್ನಮಿತರೆ ಜನಾಃ ॥

– ನೀತಿಬೋಧ 121

**ಅರ್ಥ**: ಕನ್ಯೆಯು ಸುಂದರ ಮತ್ತು ರೂಪವಂತ ವರನನ್ನು ಬೇಡುತ್ತಾಳೆ. ಅವಳ ತಾಯಿ ಧನವಂತ ಇರಲಿ ಎಂದು ಬಯಸುತ್ತಾಳೆ. ಅವಳ ತಂದೆ ಅಳಿಯ ಓದು–ಬರಹ ಬರುವವನು(ವಿದ್ಯಾವಂತ) ಇರಲಿ ಎಂದು ಬಯಸುತ್ತಾನೆ. ಮತ್ತು ಅವಳ ಸಹೋದರ–ಬಂಧುಂ–ಭಾಂದವರು ಅವಳು ಸಂತೋಷದಿಂದಿರಲಿ ಎಂದು ಬಯಸುತ್ತಾರೆ. ಅದೇ ರೀತಿ ಮದುವೆಗೆ ಬಂದ ಜನ ಸಿಹಿಯಾದ ತಿಂಡಿ–ತಿನಿಸುಗಳನ್ನು ಬಯಸುತ್ತಾರೆ.

ವರನಿಗೆ ವಿವಾಹದ ಸಮಯದಲ್ಲಿ ಕನ್ಯೆಯ ಪಕ್ಷದವರಿಂದ ಉಡುಗೊರೆ ಸಿಗುತ್ತದೆ. ಕನ್ಯಾದಾನದ ಜೊತೆಗೆ ವರನಿಗೆ ದಕ್ಷಿಣೆ ಕೊಡಲಾಗುತ್ತದೆ. ಆದರೆ ಅದು ಕಾಲಾಂತರದಲ್ಲಿ ವರದಕ್ಷಿಣೆ ಆಯಿತು. ನಂತರ ಅದು ಕೊಡುವವರಿಗೆ ಮತ್ತು ತೆಗೆದುಕೊಳ್ಳುವವರಿಗೆ ತನು–ಮನದಲ್ಲಿ ಹೀನ ಭಾವನೆಯನ್ನು ಉತ್ಪಾದಿಸತೊಡಗಿತು. ಅದೇ ವರದಕ್ಷಿಣೆ ಇದೆ.

### 28ನೇ ಚಾತುರ್ಮಾಸ ಕಳಸ ಸ್ಥಾಪನ ಸಮಾರಂಭ

# "ಚಾತುರ್ಮಾಸವು ಧರ್ಮಾಚಾರಣೆಗೆ ಪ್ರೇರಕ"

–ಮುನಿಶ್ರೀ ಪುಣ್ಯಸಾಗರರು

### ಪ್ರಥಮ ಬಾರಿಗೆ ಜೈನ ಬೋರ್ಡಿಂಗನಲ್ಲಿ ವರ್ಷಾಯೋಗ : ವೈಭವದಿಂದ ನಡೆದ ಕಳಸಸ್ಥಾಪನೆ




ಹುಬ್ಬಳ್ಳಿ: ಮಾನವನ ಬದುಕಿಗೆ ದಾನ, ಧರ್ಮ, ಪರೋಪಕಾರ ಗುಣಗಳ ಜೊತೆಗೆ ಧರ್ಮಾಚಾರಣೆ ಅಗತ್ಯ. ಧರ್ಮ ಮಾತ್ರವೇ ಮನುಷ್ಯ ಜೀವನದ ಸಾರ್ಥಕತೆಗೆ ದಾರಿ. ಇದರಿಂದಾಗಿಯೇ ಅಧರ್ಮ ನಾಶವಾಗುವುದು. ಇದಕ್ಕೆ ಚಾತುರ್ಮಾಸದ ಅವಧಿ ಧರ್ಮಾಚಾರಣೆಗೆ ಪ್ರೇರಕವಾಗಿದೆ ಎಂದು ಮುನಿಶ್ರೀ 108 ಪುಣ್ಯಸಾಗರ ಮುನಿಮಹಾರಾಜರು ಜು. 28ರಂದು ಹುಬ್ಬಳ್ಳಿ ದಿಗಂಬರ ಜೈನ ಬೋರ್ಡಿಂಗ್, ಬ್ರಾಹ್ಮೀಲ ಮಹಿಳಾ ಮಂಡಲ ಹಾಗೂ ಇತರ ಮಹಿಳಾ ಮಂಡಲಗಳ ಸಹಯೋಗದಲ್ಲಿ ಪ್ರಥಮ ಬಾರಿಗೆ ಜೈನ ಬೋರ್ಡಿಂಗನಲ್ಲಿ 28ನೇ ಚಾತುರ್ಮಾಸ ಕಳಸ ಸ್ಥಾಪನ ಸಮಾರಂಭದ ಸಾನಿಧ್ಯ ವಹಿಸಿ ಪ್ರವಚನ ಮಾಡಿದರು.

ಧರ್ಮ ಎಂದೂ ನಾಶವಾಗುವುದಿಲ್ಲ. ಧರ್ಮಕಾರ್ಯ ಮಾಡಿದರೆ ಮಾತ್ರ ಧರ್ಮ ಉಳಿಯುತ್ತದೆ. ಚಾತುರ್ಮಾಸ ಅವಧಿಯಲ್ಲಿ ಮುನಿಗಳು, ತ್ಯಾಗಿಗಳು ಪೂಜೆ, ಆರಾಧನೆ, ಉಪನ್ಯಾಸ ಮುಂತಾದ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಇದರ ಸದ್ವಿನಿಯೋಗವನ್ನು ಶ್ರಾವಕ–ಶ್ರಾವಿಕೆಯರು ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಸಮಾರಂಭದಲ್ಲಿ ವರೂರಿನ ನವಗ್ರಹ ಕ್ಷೇತ್ರದ ಪರಮಪೂಜ್ಯ ಸ್ವಸ್ತಿಶ್ರೀ ಧರ್ಮಸೇನ ಭಟ್ಟಾರಕ ಮಹಾಸ್ವಾಮಿಗಳು, ಶ್ರೀಕ್ಷೇತ್ರ ಸೊಂದಾ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮಿಗಳು ಉಪಸ್ಥಿತರಿದ್ದರು. ನಂತರ ಹಲವಾರು ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

29ನೇ ವಾರ್ಷಿಕ ಪೂಜಾ ಮಹೋತ್ಸವ

## "ಮಾನವನಿಗೆ ಬಸದಿಯ ನಿತ್ಯ ದರ್ಶನ ಅಗತ್ಯ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಬೆಂಗಳೂರು : ಪುರಾತನ ಕಾಲದಿಂದಲೂ ನಮ್ಮ ಜೈನ ಧರ್ಮದಲ್ಲಿ ಭಕ್ತಿ, ಶ್ರದ್ಧೆ, ಸಂಸ್ಕೃತಿ, ಸಂಸ್ಕಾರ ಪದ್ಧತಿ ಇದ್ದು ಜೈನ ಧರ್ಮಿಯರು ನಿತ್ಯ ಬಸದಿಯ ದರ್ಶನ ಮಾಡುವ ಪದ್ಧತಿ ಬೆಳೆಸಿಕೊಳ್ಳಬೇಕೆಂದು** ಶ್ರೀಕ್ಷೇತ್ರ ಹೊಂಬುಜ ದಿಗಂಬರ ಜೈನಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳು ತಿಳಿಸಿದರು.

ಅವರು ಜುಲೈ 28, 2024ರ ಭಾನುವಾರದಂದು ನಗರದ ಪುಟ್ಟೇನಹಳ್ಳಿ ಶ್ರೀ ಶೀತಲನಾಥ ತೀರ್ಥಂಕರ ಜೈನ ಬಸದಿಯ ವಾರ್ಷಿಕ ಪೂಜಾ ಮಹೋತ್ಸವದ ಪಾವನ ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು.

ಭೂಮಿಯಲ್ಲಿ ತೀರ್ಥಂಕರರು ಧರ್ಮದ ರಕ್ಷಣೆಗಾಗಿ ನೆಲೆಸಿದ್ದಾರೆ. ನಮ್ಮ ಧರ್ಮ ಭೂಮಿಯಲ್ಲಿ ಸಂಸ್ಕಾರ ಭಾವನೆ ಇರುವುದರಿಂದ ಇದು ಧರ್ಮಭೂಮಿಯಾಗಿದೆ. ಭಗವಂತನ ಬಗ್ಗೆ ಭಕ್ತಿ ಭಾವ ಅಗತ್ಯ ಎಂದರು.

ಎಲ್ಲರೂ ಧರ್ಮವನ್ನು ಪಾಲಿಸಿದಾಗ ಕರ್ಮ ನಾಶವಾಗಲಿದೆ. ಯಾವುದು ಬೇಕು-ಬೇಡ ಎನ್ನುವುದು ಸ್ವಂತ ನಿರ್ಧಾರವಾಗಿದ್ದು, ಒಳ್ಳೆಯ ಭಾವನೆ ಕೆಲಸ ಪರೋಪಕಾರ ಅಗತ್ಯ ಇದರಿಂದ ಧರ್ಮದ ಉಳಿವು ಸಾಧ್ಯ. ತಮ್ಮ ನಿಜಗುಣದಿಂದ ದೇವರನ್ನು ಪೂಜಿಸಬೇಕೆಂದರು.

ನಾವು ಸನ್ಮಾರ್ಗದಲ್ಲಿ ನಡೆದು ಸಂಸ್ಕಾರ ನಿಯಮ ಪಾಲಿಸಬೇಕೆಂದ ಅವರು ತಂದೆ ತಾಯಿ ಮಕ್ಕಳಿಗೆ ಬಸದಿಗೆ ಹೋಗುವ ಬರುವ ಪದ್ಧತಿ ಬೆಳೆಸಿಕೊಳ್ಳಬೇಕೆಂದ ಅವರು, ಕಾಣದಿರುವ ಸತ್ಯಗಳು ಬಹಳಷ್ಟುವೇ ಅದನ್ನ ತಿಳಿದು ಅರ್ಥ ಮಾಡಿಕೊಂಡು ಭಯ ಭಕ್ತಿಯಿಂದ ಧರ್ಮ ನಿಯಮ ಪಾಲಿಸಬೇಕು. ಭಗವಂತನ ಬಳಿ ನೀವೇ ದರ್ಶನಕ್ಕೆ ಹೋದಾಗ ಅವರೇ ಪರಿವರ್ತನೆಯಾಗುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ಟ್ರಸ್ಟ್ ಪದಾಧಿಕಾರಿಗಳು ಶ್ರಾವಕ-ಶ್ರಾವಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

WWW.HOMBUJAPADMAVATI.ORG

## ಹುಂಚ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೊಸ ಇ.ಸಿ.ಜಿ. ಉಪಕರಣ ಕೊಡುಗೆ



**ಹೊಂಬುಜ :** ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಹುಂಚ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೊಸ ಇ.ಸಿ.ಜಿ. ವೈದ್ಯಕೀಯ ಉಪಕರಣವನ್ನು ಆಗಸ್ಟ 08 ರಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ವೈದ್ಯಾಧಿಕಾರಿ ಡಾ. ನಿತೀಶ್ ಭಟ್ ಅವರಿಗೆ ಹಸ್ತಾಂತರಿಸಿದರು.

ಗ್ರಾಮೀಣ ಪ್ರದೇಶದ ಸಾರ್ವಜನಿಕ ನಾಗರೀಕರಿಗೆ ವೈದ್ಯಕೀಯ ಪರೀಕ್ಷೆಗೆ ಸದುಪಯೋಗವಾಗಲೆಂದು ಸ್ವಸ್ತಿಶ್ರೀಗಳವರು ತಿಳಿಸಿ ವೈದ್ಯಾಧಿಕಾರಿ, ಸಿಬ್ಬಂದಿ ತಾಂತ್ರಿಕ ವರ್ಗದವರನ್ನು ಹರಸಿದರು.

ಈ ಸಂದರ್ಭದಲ್ಲಿ ವೈದ್ಯರಾದ ಶ್ರೀಮತಿ ಪದ್ಮಿನಿ ವಸಂತ ಯು.ಎಸ್.ಎ. ದಾನಿಗಳ ಪರವಾಗಿ ಬೆಂಗಳೂರಿನ ವೈದ್ಯರಾದ ಡಾ. ಚಂದ್ರಕಾಂತ್ ದಂಪತಿಗಳು, ಹುಂಚ ಆಸ್ಪತ್ರೆಯ ಸಿಬ್ಬಂದಿವರ್ಗದವರು ಇನ್ನಿತರರು ಉಪಸ್ಥಿತರಿದ್ದರು.

ಕನ್ನಡ ಭಾಷಾ ಶಿಕ್ಷಕರಿಗೆ ಭಾಷೆ-ಸಾಹಿತ್ಯ ರಸಗ್ರಹಣ ಶಿಬಿರ

## "ಪಠ್ಯದಲ್ಲಿ ಹಳೆಗನ್ನಡ ಉಪೇಕ್ಷೆ ಸಲ್ಲದು"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ :** ಪಠ್ಯಪುಸ್ತಕ ಹೊರೆ ಕಡಿಮೆ ಮಾಡಲು ಹಳೆಗನ್ನಡ ಸಾಹಿತ್ಯವನ್ನು ಉಪೇಕ್ಷೆ ಮಾಡುತ್ತಿರುವುದು ಸರಿಯಲ್ಲ ಎಂದು ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ವತಿಯಿಂದ ಶ್ರೀಕ್ಷೇತ್ರ ಹೊಂಬುಜ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಹೊಂಬುಜದಲ್ಲಿ ಹೊಸನಗರ ಮತ್ತು ತೀರ್ಥಹಳ್ಳಿ ತಾಲ್ಲೂಕಿನ ಸರ್ಕಾರಿ, ಅನುದಾನ, ಅನುದಾನ ರಹಿತ ಪ್ರೌಢಶಾಲಾ ಕನ್ನಡ ಭಾಷಾ ಶಿಕ್ಷಕರಿಗಾಗಿ ಏರ್ಪಡಿಸಿದ್ದ ಭಾಷೆ-ಸಾಹಿತ್ಯ ರಸಗ್ರಹಣ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಇಪ್ಪತ್ತನೇಯ ಶತಮಾನದಲ್ಲಿ ಕವಿಗಳು, ವಿದ್ವಾಂಸರು ಹಳೆಗನ್ನಡ ಸಾಹಿತ್ಯದ ಅಧ್ಯಯನ ಮಾಡುತ್ತಿದ್ದರು. ಶಿಕ್ಷಕರು ಮಕ್ಕಳಿಗೆ ಹೊಸಗನ್ನಡದ ಕುರಿತಾಗಿ ರಸವತ್ತಾಗಿ ಕಲಿಸುತ್ತಿದ್ದರು. ಆದರೇ ಇಂದು ಹಳೆಗನ್ನಡವನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡುತ್ತಿರುವುದು ಬೇಸರದ ಸಂಗತಿ.

ಪಠ್ಯಪುಸ್ತಕ ತೂಕ ಕಡಿಮೆ ಮಾಡಲು ಹೋಗಿ ಹಳೆಗನ್ನಡ ಸಾಹಿತ್ಯಕ್ಕೆ ಸಿಗಬೇಕಾದ ನ್ಯಾಯ ಸಿಗಲಿಲ್ಲ. ಹಳೆಗನ್ನಡ ಸಾಹಿತ್ಯ ಒಂದು ಪುಟಕ್ಕೆ ಸೀಮಿತವಾಗಿದೆ. ಕನ್ನಡ ಸಾಹಿತ್ಯ ಪರಿಣಾಮಕಾರಿಯಾಗಿ ಬೋಧನೆ ಮಾಡಲು ಇಂತಹ ರಸಗ್ರಹಣ ಶಿಬಿರಗಳ ತುರ್ತಿದೆ ಎಂದು ಅಭಿಪ್ರಾಯಪಟ್ಟರು.

ಹಿರಿಯ ಸಾಹಿತಿ ಡಾ. ಎಸ್.ಪಿ. ಪದ್ಮಪ್ರಸಾದ್ ಮಾತನಾಡಿ, ಶಿಕ್ಷಕರು ಪಾಠದ ಸಾಹಿತ್ಯವನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಅದನ್ನು ರಸವತ್ತಾಗಿ ಮಕ್ಕಳ ಮನಸ್ಸಿಗೆ ದಾಟಿಸಬೇಕು. ಉಪನ್ಯಾಸದ ವೇಳೆ ನಿಮ್ಮ ಅನುಭವ, ಅಭಿರುಚಿ ಮುಖ್ಯವಾಗಿರುತ್ತದೆ. ವಿದ್ಯಾರ್ಥಿಗೆ ಅರ್ಥವಾಗುವುದಕ್ಕಿಂತ ಅನುಭವ ಆಗುವಂತೆ ಬೋಧಿಸುವ ಕಲೆ ರೂಪಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಿ. ಮಂಜುನಾಥ ಮಾತನಾಡಿ ಕನ್ನಡ ಭಾಷೆಯನ್ನು ಮಕ್ಕಳಿಂದ ಸರಿಯಾಗಿ ಓದಿಸಿ, ಬರೆಸುವ ವಾತಾವರಣ ಕೊರತೆ ಎದ್ದು ಕಾಣುತ್ತಿದೆ. ಈ ಹಿನ್ನಲೆಯಲ್ಲಿ ನಾವೆಲ್ಲರೂ ಕೂಡಿ ಯೋಚಿಸಬೇಕಿದ್ದು, ರಸಗ್ರಹಣ ಶಿಬಿರಗಳು ಅಂತಹ ಯೋಜನೆಗಳಿಗೆ ಮಾರ್ಗಸೂಚಿಯಾಗಲಿ ಎಂದರು.

ಹೊಸನಗರ ತಾಲ್ಲೂಕು ಕ್ಷೇತ್ರಶಿಕ್ಷಣಾಧಿಕಾರಿ ಎಚ್.ಆರ್. ಕೃಷ್ಣಮೂರ್ತಿ, ಸಂಪನ್ಮೂಲ ವ್ಯಕ್ತಿಗಳಾದ ಡಾ. ಬಿ.ಎಂ. ಜಯಶೀಲ, ಡಾ. ಶಾಂತಾರಾಮ್ ಪ್ರಭು, ಬಿ. ಚಂದ್ರೇಗೌಡ ವಿವಿಧ ವಿಷಯಗಳ ಕುರಿತಾಗಿ ಮಾರ್ಗದರ್ಶನ ಮಾಡಿದರು. ಡಾ. ಎನ್.ಡಿ. ಹೆಗಡೆ, ಎಚ್.ಎಸ್. ವೀರೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶಿಕ್ಷಕಿ ರತ್ನಮ್ಮ ಪ್ರಾರ್ಥಿಸಿ, ತ.ಮ. ನರಸಿಂಹ ಸ್ವಾಗತಿಸಿ, ಮಂಜುನಾಥ ಕಾಮತ್ ವಂದಿಸಿ, ಆರ್. ನಾಗಭೂಷಣ ನಿರೂಪಿಸಿದರು.

## ವೈದ್ಯ ಸೇವಾ ರತ್ನ ಪ್ರಶಸ್ತಿ ಪ್ರದಾನ



**ಬೆಂಗಳೂರು :** ಇಲ್ಲಿಯ ನಯನ ಸಭಾಂಗಣದಲ್ಲಿ ದಿನಾಂಕ 25-7-2024 ರಂದು ಕರ್ನಾಟಕ ಪ್ರೆಸ್ ಕ್ಲಬ್ ವತಿಯಿಂದ ಡಾ. ನೀರಜಾ ನಾಗೇಂದ್ರಕುಮಾರ್ ಅವರಿಗೆ 'ವೈದ್ಯ ಸೇವಾ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸನ್ಮಾನ್ಯ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಗುರುದೇವ

GURUDEVA MONTHLY

RNI No. 13248/57-POSTEL REGD No. KA/SK/SMG 198/2024-26

Date of Posting 17th of every month. Sub Post office, Humcha - 577436

ವಾರ್ಷಿಕ ಚಂದಾ : ರೂಪಾಯಿ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000-00 ಮಾತ್ರ

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722